# ಸದನ ಮಹಜರ್‌ಗೆ ನಕಾರ

## ಅನುಮತಿ ನಿರಾಕರಿಸಿದ ಸಭಾಪತಿ | ಪೊಲೀಸರಿಗೆ ಇಕ್ಕಟ್ಟು

■ **ವಿಕ ಸುದ್ದಿಲೋಕ** ಬೆಂಗಳೂರು

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಬಿಜೆಪಿ ಎಂಎಲ್ಸಿ ಸಿ.ಟಿ.ರವಿ ಅವಾಚ್ಯ ಶಬ್ದದಿಂದ ನಿಂದಿಸಿದ್ದಾರೆ ಎಂಬ ಆರೋಪ ಪ್ರಕರಣ ಸಂಬಂಧ ಸದನದಲ್ಲಿ ಸ್ಥಳ ಮಹಜರು ನಡೆಸಲು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅವಕಾಶ ನಿರಾಕರಿಸಿದ್ದು, ಬೆಳಗಾವಿ ನಗರ ಪೊಲೀಸರು ಇಕ್ಕಟ್ಟಿಗೆ ಸಿಲುಕಿದ್ದಾರೆ.



ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಅವರು ಸದನದಲ್ಲಿ ಸ್ಥಳ ಮಹಜರಿಗೆ ಅನುಮತಿ ಕೋರಿ ಪತ್ರ ಬರೆದಿದ್ದು, ಸಭಾಪತಿಗಳು ಅನುಮತಿ ನೀಡಿಲ್ಲ. ಘಟನಾ ಸ್ಥಳದಲ್ಲಿ ಮಹಜರ್ ನಡೆಯದ ಕಾರಣ ಪೊಲೀಸ್ ತನಿಖೆಗೆ ಹಿನ್ನಡೆಯಾದಂತಾಗಿದ್ದು, ಮುಂದಿನ ಬೆಳವಣಿಗೆಗಳ ಬಗ್ಗೆ ಕುತೂಹಲ ಮೂಡಿಸಿದೆ.

''ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಸಿ.ಟಿ.ರವಿ ಅವಾಚ್ಯ ಶಬ್ದದಿಂದ ನಿಂದಿಸಿದ್ದಾರೆ ಎಂಬ ಆರೋಪ ಪ್ರಕರಣ ಸಂಬಂಧ ಸದನದಲ್ಲಿ ಸ್ಥಳ ಮಹಜರಿಗೆ ಅವಕಾಶ ನೀಡಿಲ್ಲ,'' ಎಂದು ಸಭಾಪತಿಗಳೇ ಸ್ಪಷ್ಟಪಡಿಸಿದ್ದಾರೆ.

**ಪೊಲೀಸರು ಹಸ್ತಕ್ಷೇಪ ಮಾಡುವಂತಿಲ್ಲ**

ಬೆಂಗಳೂರಿನಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಸಭಾಪತಿ ಬಸವರಾಜ ಹೊರಟ್ಟಿ, ''ಸದನದ ಒಳಗೆ ನಡೆದ ವಿಚಾರದಲ್ಲಿ ಪೊಲೀಸರು ಹಸ್ತಕ್ಷೇಪ ಮಾಡುವಂತಿಲ್ಲ. .ಪ್ರಕರಣ ಸಂಬಂಧ ಸದನದಲ್ಲಿ ಮಹಜರು ಮಾಡಬೇಕಿದೆ ಎಂದು ಪೊಲೀಸರು ತಿಳಿಸಿದರು. ಆದರೆ ಮಹಜರಿಗೆ ಅವಕಾಶ ನೀಡದೆ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾದ ಬಳಿಕ ಸದನಕ್ಕೆ ಬೀಗ ಹಾಕಿಸಲಾಯಿತು. ಸದನ ಪ್ರವೇಶಿಸಲು ಪೊಲೀಸರಿಗೆ ಯಾವುದೇ ಅಧಿಕಾರ ಅಥವಾ ಹಕ್ಕು ಇಲ್ಲ,'' ಎಂದು ಹೇಳಿದರು.



**ಮುಗಿದ ಅಧ್ಯಾಯ:** ''ಸದನದಲ್ಲಿ ಡಿ.19ರಂದು ನಡೆದಿದೆ ಎನ್ನಲಾದ ಘಟನೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಬಳಿಕ ನಾನು ರೂಲಿಂಗ್ ನೀಡಿದ್ದು, ಅಲ್ಲಿಗೆ ಅದು ಮುಗಿದ ಅಧ್ಯಾಯ. ಮುಂದೆ ಎರಡೂ ಕಡೆಯಿಂದ ಏನಾದರೂ ದೂರು ಬಂದರೆ ಮರುಪರಿಶೀಲಿಸುವ ಪರಿಸ್ಥಿತಿ ಉದ್ಭವವಾಗಬಹುದು. ಸದ್ಯಕ್ಕೆ ಏನೂ ಬೆಳವಣಿಗೆ ಇಲ್ಲ,'' ಎಂದು ತಿಳಿಸಿದರು.

**ಅನುಮತಿ ಸಿಕ್ಕಿಲ್ಲ:** ಇನ್ನೊಂದೆಡೆ ಬೆಳಗಾವಿಯಲ್ಲಿ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್, ''ಪ್ರಕರಣ ಸಂಬಂಧ ಸ್ಥಳ ಮಹಜರಿಗೆ ಅನುಮತಿ ಕೋರಿ ಸಭಾಪತಿಗಳಿಗೆ ಪತ್ರ ಬರೆಯಲಾಗಿದ್ದು, ಈವರೆಗೆ ಅನುಮತಿ ದೊರಕಿಲ್ಲ. ನಾವು ಸದನ ಪ್ರವೇಶಿಸಿಲ್ಲ. ಸಿ.ಟಿ.ರವಿ ಅವರು ಹೊರಗೆ ಬಂದ ಮೇಲೆ ಬಂಧಿಸಲಾಗಿದೆ,'' ಎಂದು ಹೇಳಿದರು.

ಪ್ರಕರಣದ ತನಿಖೆ ಕೈಗೊಂಡಿರುವ ಬೆಳಗಾವಿ ಪೊಲೀಸರು ಘಟನಾ ಸ್ಥಳದಲ್ಲಿ ಮಹಜರು ಮಾಡಲು ಸಾಧ್ಯವಾಗದ ಕಾರಣ ತನಿಖೆಯ ಮುಂದಿನ ಹಾದಿ ಬಗ್ಗೆ ಕುತೂಹಲ ಮೂಡಿದೆ. ಸದನದ ಒಳಗಿನ ವಿಚಾರದಲ್ಲಿ ಪೊಲೀಸರು ಹಸ್ತಕ್ಷೇಪ ಮಾಡುವಂತಿಲ್ಲ ಎಂಬ ಸಭಾಪತಿಗಳ ಎಚ್ಚರಿಕೆಯು ಪೊಲೀಸರನ್ನು ಇನ್ನಷ್ಟು ಇಕ್ಕಟ್ಟಿಗೆ ದೂಡಿದಂತಾಗಿದೆ.

**ರವಿ ದೂರು: ಎಫ್‌ಐಆರ್ ದಾಖಲು** »02

## ಎರಡು ವಿಡಿಯೊ ಬಿಡುಗಡೆ | ರವಿಯನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

# ಬಿಜೆಪಿಯ ಎನ್‌ಕೌಂಟರ್ ಆರೋಪಕ್ಕೆ ಕಾಂಗ್ರೆಸ್ ಕೆಂಡ

• ವಿಕ ಸುದ್ದಿಲೋಕ ಬೆಳಗಾವಿ

ಎಂಎಲ್‌ಸಿ ಸಿ.ಟಿ.ರವಿ ಬಂಧನ ಹಾಗೂ ಅವಾಚ್ಯ ಮಾತುಗಳ ವಿಚಾರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ವಾಕ್ಸಮರ ಮುಂದುವರಿದಿದೆ. ರವಿಗೆ ಗಾಯವೇ ಆಗಿಲ್ಲ ನಾಟಕ ಮಾಡುತ್ತಿದ್ದಾರೆ ಎಂದು ಲಕ್ಷ್ಮೀ ಹೆಬ್ಬಾಳಕರ ಟೀಕಿಸಿದರು. ಇದಕ್ಕೆ ತಿರುಗೇಟು ನೀಡಿದ ಸಿ.ಟಿ. ರವಿ, "ಅವರೇನು ಡಾಕ್ಟ್ರಾ" ಎಂದು ಗುಡುಗಿದ್ದಾರೆ. ಬಿಜೆಪಿ ನಾಯಕರ ಎನ್‌ಕೌಂಟರ್ ಆರೋಪಕ್ಕೆ ಕೆಂಡವಾಗಿರುವ ಕಾಂಗ್ರೆಸ್ ನಾಯಕರು, "ಇದು ಗುಜರಾತ್ ಅಲ್ಲ" ಎಂದು ಪ್ರತಿಕ್ರಿಯಿಸಿದ್ದಾರೆ.

### ಎಲ್ಲಾಗಿದೆ ಗಾಯ? ಎಷ್ಟಾಗಿದೆ ಗಾಯ?

"ರವಿ ಮಾತುಗಳಿಂದ ತುಂಬಾ ನೊಂದಿದ್ದು, ಅವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ" ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಸೋಮವಾರ 2 ವಿಡಿಯೊಗಳನ್ನು ಬಿಡುಗಡೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, "ನಾನು ಸಂಘರ್ಷದಿಂದ ಮೇಲೆ ಬಂದಿದ್ದೇನೆ. ರವಿ ಅವರು ಹಾರ, ಹಾಕಿಸಿಕೊಂಡು ವೈಭವೀಕರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಅಪರಾಧಿ ಭಾವನೆ ಕಾಡುತ್ತಿದೆ. ಅವರೂ ಬಿಜೆಪಿಯವರು ರವಿ ಬೆನ್ನಿಗೆ ನಿಂತಿದ್ದು ಎಷ್ಟು ಸರಿ," ಎಂದು ಪ್ರಶ್ನಿಸಿದರು.

### ಮತ್ತೆ ದೂರು ಕೊಡುವೆ

"ನಾನು ಮತ್ತೆ ಸಭಾಪತಿ ಅವರಿಗೆ ದೂರು ಕೊಡುತ್ತೇನೆ. ರವಿ ವಿರುದ್ಧ ಕಾನೂನು ಹೋರಾಟ ಮುಂದುವರಿಸುತ್ತೇನೆ. ತನಿಖೆ ಬೇಗ ಆಗಬೇಕು. ಎಫ್‌ಎಸ್‌ಎಲ್ ವರದಿ ಬೇಗ ಬಹಿರಂಗವಾಗಬೇಕು," ಎಂದರು.

### ಪಿಎಂಗೆ ಪತ್ರ ಬರೆಯುವೆ

"ಸಿ.ಟಿ. ರವಿ ಅವರಿಗೆ ಎಲ್ಲಾಗಿದೆ ಗಾಯ? ಎಷ್ಟಾಗಿದೆ ಗಾಯ? ಪೊಲೀಸರು ಎನ್‌ಕೌಂಟರ್ ಮಾಡುತ್ತಿದ್ದರು ಎಂದು ಬಿಜೆಪಿಯವರು ಹೇಳುತ್ತಿದ್ದಾರಲ್ಲಾ? ನಾಟಕ ಆಗಲ್ಲ ಅವರಿಗೆ. ಕಾನೂನು ಪ್ರಕಾರ ಪೊಲೀಸರು ನಡೆದುಕೊಂಡಿದ್ದಾರೆ. ಸಿ.ಟಿ. ರವಿ ವಿರುದ್ಧ ಪ್ರಧಾನಮಂತ್ರಿ, ರಾಷ್ಟ್ರಪತಿಗೂ ಪತ್ರ ಬರೆಯುತ್ತೇನೆ. ಅವಶ್ಯವಾದರೆ ಭೇಟಿ ಆಗುತ್ತೇನೆ," ಎಂದು ಹೇಳಿದರು. 'ಬಿಜೆಪಿಯವರು ಬೆಳಗಾವಿ ಚಲೋ ಮಾಡುತ್ತಾರೆ' ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಚಿವೆ ಹೆಬ್ಬಾಳಕರ್, "ಬೆಳಗಾವಿ ಶಾಂತಿಯ ತೋಟ. ನಾಲಿಗೆಯನ್ನು ಸ್ವಚ್ಛವಾಗಿಟ್ಟುಕೊಂಡು ಯಾರು ಬೇಕಾದರೂ ಬರಬಹುದು," ಎಂದರು.





## ಹೆಬ್ಬಾಳಕರ್ ಏನು ಡಾಕ್ಟ್ರೇ?

**ಚಿಕ್ಕಮಗಳೂರು:** "ನನಗೆ ಏನೂ ಆಗಿಲ್ಲ ಎಂದು ಹೇಳಿಕೆ ನೀಡಲು ಲಕ್ಷ್ಮೀ ಹೆಬ್ಬಾಳಕರ್ ಡಾಕ್ಟ್ರೇ," ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಪ್ರಶ್ನಿಸಿದರು.

ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿ, "ಗಾಯ ಹಾಗೂ ರಕ್ತವನ್ನು ಜಗತ್ತು ನೋಡಿದೆ. ಖಾನಾಪುರದಲ್ಲಿ ಗಾಯ ಆಗಿದ್ದು, ರಾಮದುರ್ಗದಲ್ಲಿ ಚಿಕಿತ್ಸೆ ನೀಡಿದ್ದಾರೆ. ಅವರ ತಪ್ಪು ಮುಚ್ಚಿಕೊಳ್ಳಲು ಸುಳ್ಳುಗಳ ಸರಮಾಲೆ ಹೆಣೆದಿದ್ದಾರೆ," ಎಂದು ಆರೋಪಿಸಿದರು.

"ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಅವರ ಬೆದರಿಕೆಗೆ ಹೆದರಲ್ಲ, ಬೆಳಗಾವಿ ರಿಪಬ್ಲಿಕ್ ಆಗಲು ಜನ ಒಪ್ಪಲ್ಲ, ನನ್ನ ಮೇಲಿನ ಹಲ್ಲೆ ಸಂಬಂಧ ಕಿಶೋರ್ ಅರುಣ್ ದೂರು ನೀಡಿದ್ದಾರೆ. ಸುವರ್ಣಸೌಧದ ಪಶ್ಚಿಮ ಬಾಗಿಲಿನಲ್ಲಿ ಹಲ್ಲೆಗೆ ಮುಂದಾದ ವೇಳೆ ಕಿಶೋರ್ ಅರುಣ್ ನನ್ನ ಜತೆ ಇದ್ದರು. ಹಾಗಾಗಿ ದೂರು ನೀಡಿದ್ದು ಏನು ಕ್ರಮ ಕೈಗೊಳ್ಳುತ್ತಾರೆ ನೋಡೋಣ," ಎಂದರು.

"ಖಾನಾಪುರದಲ್ಲಿ ಕೊಟ್ಟ ದೂರಿಗೆ ಇನ್ನೂ ಎಫ್‌ಐಆರ್ ಪ್ರತಿ ನೀಡಿಲ್ಲ, ಕಮಿಷನರ್ 15 ದಿನ ಸಮಯ ಇದೆ ಎಂದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಪ್ರತ್ಯೇಕ ಕಾನೂನಿಲ್ಲ," ಎಂದು ಕುಟುಕಿದರು.

"ನನ್ನ ಮೇಲೆ ಹಲ್ಲೆಗೆ ಮುಂದಾದವರು ಲಕ್ಷ್ಮಿ ಹೆಬ್ಬಾಳಕರ್ ಇಬ್ಬರು ಪಿಎಗಳು, ಬಸುರ್ತೆ ಮುಖ್ಯಮರು ಇದ್ದರು. ಎಲ್ಲರ ಹೆಸರು ನಮೂದಿಸಿ ದೂರು ನೀಡಿದ್ದೇನೆ. ನನ್ನ ಮೇಲೆ ಕ್ರಮ ಕೈಗೊಳ್ಳುತ್ತಾರೆ ಎಂದಾದರೆ ಅವರ ಮೇಲೆ ಏಕಿಲ್ಲ," ಎಂದರು.

## ಮನಸ್ಸಿಗೆ ಬಹಳ ನೋವಾಗಿದೆ: ಸಭಾಪತಿ

**ಬೆಂಗಳೂರು:** "ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಎಂಎಲ್ಸಿ ಸಿ.ಟಿ.ರವಿ ಅವರು ಅವಾಚ್ಯ ಶಬ್ದದಿಂದ ನಿಂದಿಸಿದ್ದಾರೆ ಎಂಬ ಆರೋಪ ಸಂಬಂಧ ನಾನು ನನ್ನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ. ಈ ಬೆಳವಣಿಗೆಯಿಂದ ಮನಸ್ಸಿಗೆ ನೋವಾಗಿದೆ," ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

"ಸದನದ ಒಳಗೆ ನಿಂದನೆ ಘಟನೆ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಇಬ್ಬರನ್ನೂ ಕರೆದು ಮಾತನಾಡಿ ರೂಲಿಂಗ್ ನೀಡಿದ್ದೇನೆ. ಆದರೂ ಇಬ್ಬರೂ ಒಪ್ಪಲಿಲ್ಲ. ಸಿ.ಟಿ.ರವಿ ಅವರು ಅವಾಚ್ಯ ಶಬ್ದ ಬಳಸಿದ್ದಾರೆ ಎಂಬುದಕ್ಕೆ ಸದನದ ಅಧಿಕೃತ ಆಡಿಯೊ, ವಿಡಿಯೊ ದಾಖಲೆ ಇಲ್ಲ. ಹಾಗಾಗಿ ಪ್ರಕರಣವನ್ನು ನೀತಿಸಂಹಿತೆ ಸಮಿತಿಗೆ ನೀಡಿಲ್ಲ. ಸಿ.ಟಿ.ರವಿ ಅವರ ಬಂಧನ ಪ್ರಕ್ರಿಯೆ ನಿಯಮಾನುಸಾರ ನಡೆದಿದೆ," ಎಂದು ತಿಳಿಸಿದರು.


## ಸ್ವಯಂಪ್ರೇರಿತ ದೂರು: 10 ಮಂದಿ ಮೇಲೆ ಎಫ್‌ಐಆರ್

ಸುವರ್ಣ ವಿಧಾನಸೌಧದಲ್ಲಿ ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಮೇಲೆ ಹಲ್ಲೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಕೊನೆಗೂ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಹಿರೇಬಾಗೇವಾಡಿ ಠಾಣೆಯಲ್ಲಿ ಪೊಲೀಸರು ಸೋಮವಾರ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದು, ಆರೋಪಿಗಳಾಗಿ ಯಾರ ಹೆಸರನ್ನೂ ಉಲ್ಲೇಖಿಸದೇ 10 ಜನ ಅಪರಿಚಿತರಿಂದ ಹಲ್ಲೆಗೆ ಯತ್ನ ನಡೆದಿದೆ ಎಂದು ನಮೂದಿಸಲಾಗಿದೆ. ಎಂಎಲ್‌ಸಿ ಡಿ.ಎಸ್. ಅರುಣ್, ಎಸ್.ವಿ.ಸಂಕನೂರು ಹಾಗೂ ಕಿಶೋರ್ ಬಿ.ಎಸ್. ನೀಡಿದ ದೂರನ್ನು ಸಚಿವಾಲಯದ ಕಾರ್ಯದರ್ಶಿಯು ಕಮಿಷನರ್ ಕಚೇರಿಗೆ ರವಾನಿಸಿದ್ದರು. ಇದನ್ನು ಆಧರಿಸಿ ಎಫ್‌ಐಆರ್ ದಾಖಲಿಸಿದ್ದಾರೆ. ಖಾನಾಪುರ ಠಾಣೆಯಲ್ಲಿ ಸಿ.ಟಿ.ರವಿ ಅವರು ನೀಡಿರುವ ದೂರು ಅರ್ಜಿ ಇನ್ನೂ ಪರಿಶೀಲನೆ ಹಂತದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, "ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ಪರಿಶೀಲಿಸಿ ಕೃತ್ಯ ಎಸಗಿದವರ ಬಗ್ಗೆ ಖಚಿತಪಡಿಸಿಕೊಂಡು ಕ್ರಮ ಜರುಗಿಸುತ್ತೇವೆ," ಎಂದು ಹೇಳಿದರು.

## ಯಾರಿಗಾದ್ರೂ ದೂರು ಕೊಡಲಿ

**ಮೈಸೂರು:** "ಗಲಾಟೆ ನಡೆದ ದಿನ ಸಿ.ಟಿ.ರವಿ ಜತೆ ಮಾಧ್ಯಮ ಪ್ರತಿನಿಧಿಗಳು ಇದ್ದಿದ್ದಕ್ಕೆ ಅವರು ಬಚಾವ್ ಆದರು. ಇಲ್ಲದಿದ್ದರೆ ಏನಾಗುತ್ತಿತ್ತೋ? ಸದನದ ವಿಚಾರದಲ್ಲಿ ಸ್ಪೀಕರ್ ತೀರ್ಮಾನವೇ ಅಂತಿಮ," ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, "ಪ್ರಕರಣದಲ್ಲಿ ಯಾರ ತಪ್ಪು ಇದೆ ಎಂಬುದನ್ನು ಸ್ಪೀಕರ್ ತನಿಖೆ ಮಾಡಿಸಲಿ. ನಮ್ಮದೇ ತಪ್ಪಾಗಿದ್ದರೂ ಅದನ್ನು ಸ್ವೀಕರಿಸುತ್ತೇವೆ," ಎಂದರು. "ಪೊಲೀಸರ ಮೂಲಕ ಸಿ.ಟಿ.ರವಿ ಅವರನ್ನು ಬಂಧಿಸಿ, ಹಿಂಸೆ ಕೊಡಿಸಿದ್ದು ಎಷ್ಟು ಸರಿ," ಎಂದು ಪ್ರಶ್ನಿಸಿದರು.

"ಸರಕಾರದಲ್ಲಿ ಶುರುವಾಗಿರುವ ಬಹಳಷ್ಟು ಹುಳುಕುಗಳನ್ನ ಮುಚ್ಚಿಕೊಳ್ಳಲು ಗಲಾಟೆ ವಿಚಾರವನ್ನು ದೊಡ್ಡದು ಮಾಡುತ್ತಿದೆ. ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಕೇಂದ್ರದಲ್ಲಿ ಯಾರಿಗೆ ಬೇಕಾದರೂ ದೂರು ಕೊಡಲಿ. ಇದು ಸದನದ ವಿಚಾರವಾಗಿದ್ದು, ಅದನ್ನು ಎಲ್ಲಿ, ಹೇಗೆ ಮಾತನಾಡಬೇಕು ಎಂಬುದಕ್ಕೆ ಕಾನೂನು, ನಿಯಮ ಇದೆ," ಎಂದರು.

# ಮಹಜರು ನಡೆಸುವುದು ಸಿಐಡಿಗೆ ಕಠಿಣ ಸವಾಲು

■ ವಿಕ ಸುದ್ದಿಲೋಕ ಬೆಂಗಳೂರು

ವಿಧಾನ ಪರಿಷತ್ ಕಲಾಪದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಬಿಜೆಪಿಯ ಸಿ.ಟಿ.ರವಿ ಅವರು ಅಶ್ಲೀಲ ಪದ ಬಳಸಿ ನಿಂದಿಸಿರುವ ಆರೋಪ ಪ್ರಕರಣದ ತನಿಖೆಯನ್ನು ಸರಕಾರ ಸಿಐಡಿಗೆ ವಹಿಸಿದ್ದು, ಕೃತ್ಯದ ಮಹಜರು ಪ್ರಕ್ರಿಯೆ ನಡೆಸುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ.

ವಿಧಾನ ಪರಿಷತ್‌ಗೆ ಪೊಲೀಸರಿಗೆ ಅವಕಾಶ ನೀಡುವುದಿಲ್ಲವೆಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ಒಂದೊಮ್ಮೆ ಅಪರಾಧ ಕೃತ್ಯದ ಜೀವಾಳ ಎಂದೇ ಭಾವಿಸಲಾಗಿರುವ 'ಮಹಜರು' ಪ್ರಕ್ರಿಯೆ ಪೂರ್ಣಕ್ಕೆ ಸಿಐಡಿ ಅಧಿಕಾರಿಗಳಿಗೆ ಅವಕಾಶ ಸಿಗದಿದ್ದರೆ, "ವಿಧಾನ ಮಂಡಲದೊಳಗೆ ನಡೆಯುವ ಅಪರಾಧ ಪ್ರಕರಣಗಳ ತನಿಖೆ ನಡೆಸಲು ಪೊಲೀಸರಿಗೆ ಪರಮಾಧಿಕಾರವಿದೆ," ಎನ್ನುವ ತೀರ್ಪನ್ನು ಆಧಾರವಾಗಿಟ್ಟು ಕೊಂಡು ಸುಪ್ರೀಂಕೋರ್ಟ್‌ನ ಮೊರೆ ಹೋಗುವ ಸಾಧ್ಯತೆಗಳಿವೆ.

ಈ ಕುರಿತ ಕಾನೂನು ಜಿಜ್ಞಾಸೆಗಳ ಕುರಿತಂತೆ ಮಾಹಿತಿ ನೀಡಿದ ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ಪಿ.ಪಿ. ಹೆಗ್ಡೆ ಅವರು, "ಮಾ. 4ರಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಪೀಠವು ಸೀತಾ ಸೊರೇನ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಕಲಾಪದೊಳಗೆ ನಡೆಯುವ ಕ್ರಿಮಿನಲ್ ಪ್ರಕರಣಗಳ ತನಿಖೆ, ವಿಚಾರಣೆ ಅಭಿಯೋಜನೆಯಿಂದ ಸದಸ್ಯರಿಗೆ ಯಾವುದೇ ವಿನಾಯಿತಿ ಇಲ್ಲವೆಂದು ಸ್ಪಷ್ಟವಾಗಿ ಹೇಳಿದೆ," ಎಂದು ತಿಳಿಸಿದರು.


"ಸಂವಿಧಾನದ ವಿಧಿ 194ರ ಅನ್ವಯ ವಿಧಾನಮಂಡಲಗಳ ಕಲಾಪಗಳಲ್ಲಿ ನಡೆಯುವ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವ ಪರಮೋಚ್ಚ ಅಧಿಕಾರ ಸಭಾಧ್ಯಕ್ಷ, ಸಭಾಪತಿಗಳಿಗೆ ಇದೆ. ಜತೆಗೆ, ಸದಸ್ಯರಿಗೆ ವಿಶೇಷ ಸವಲತ್ತುಗಳು, ವಿಶೇಷ ಹಕ್ಕು ಹಾಗೂ ರಕ್ಷಣೆಗಳು ಇವೆ. ಕಲಾಪಗಳಲ್ಲಿ ನಡೆಯುವಂತಹ ಅಹಿತಕರ ಘಟನೆಗಳಲ್ಲಿ ಇಮ್ಯುನಿಟಿ ಪಡೆಯುವ ಅವಕಾಶವೂ ಇತ್ತು. ಆದರೆ, ಸೀತಾ ಸೊರೇನ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಕಲಾಪದ ಒಳಗಿನ ಅಪರಾಧ ಕೃತ್ಯಗಳ ತನಿಖೆ ಪೊಲೀಸರಿಗೆ ಇದೆ," ಎಂಬ ಅಂಶವನ್ನು ಒತ್ತಿ ಹೇಳಿದರು.

## ಮಹಜರು ಏಕೆ ಮುಖ್ಯ?

"ಯಾವುದೇ ಅಪರಾಧ ಪ್ರಕರಣವನ್ನು ಸಾಬೀತುಪಡಿಸಲು ಮಹಜರು ಎಂಬುದು ತನಿಖೆಯ ದೀಪವಿದ್ದಂತೆ. ಮಹಜರು ಇಲ್ಲದೆ ಯಾವುದೇ ಪ್ರಕರಣದ ತನಿಖೆ ಪೂರ್ಣವಾಗದು. ಮಹಜರು ಇಲ್ಲದ ತನಿಖೆಯೇ ಕಾನೂನುಬಾಹಿರ. ನ್ಯಾಯಾಲಯಗಳಿಗೆ ಮಹಜರು ವರದಿಯೇ ಇಲ್ಲದೆ ಅಂತಿಮ ವರದಿಯನ್ನು ತನಿಖಾಧಿಕಾರಿ ಸಲ್ಲಿಸಲು ಸಾಧ್ಯವಿಲ್ಲ," ಎನ್ನುತ್ತಾರೆ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಕೆ.ಉಮೇಶ್.

## ಅನುಮತಿ ಪರಿಶೀಲನೆ: ಸಭಾಪತಿ ಹೊರಟ್ಟಿ

**ಹುಬ್ಬಳ್ಳಿ:** ಎಂಎಲ್ಸಿ ಸಿ.ಟಿ. ರವಿ ಪ್ರಕರಣವನ್ನು ಸರಕಾರ ಸಿಐಡಿ ತನಿಖೆ ವಹಿಸಿದೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಸ್ಥಳ ಮಹಜರಿಗೆ ಪರಿಷತ್ ಅವಕಾಶ ಕೊಡುವ ಕುರಿತು ಚರ್ಚಿಸಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ನಗರದಲ್ಲಿ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, "ಪ್ರಕರಣವನ್ನು ಸಿಐಡಿಗೆ ಕೊಟ್ಟಿರುವುದಾಗಿ ಗೃಹ ಸಚಿವರು ಸಹ ಹೇಳಿದ್ದಾರೆ. ಸಿಐಡಿಗೆ ಕೊಡುವ ಬಗ್ಗೆ ನಮ್ಮನ್ನು ಕೇಳುವ ಅಗತ್ಯ ಇಲ್ಲ, ಸ್ಥಳ ಮಹಜರಿಗೆ ಸಂಬಂಧಿಸಿ ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿ, ಎಜಿ ಅವರೊಂದಿಗೆ ನಾನು ಚರ್ಚೆ ನಡೆಸುತ್ತೇನೆ," ಎಂದರು.

"ನಮಗೆ ಕೊಟ್ಟಿರುವ ಎರಡು ದೂರುಗಳನ್ನು ಪೊಲೀಸರಿಗೆ ಕೊಟ್ಟಿದ್ದೇವೆ. ಸಿಐಡಿ ನಮ್ಮ ವ್ಯಾಪ್ತಿ ಮೀರಿದ್ದು, ನಮ್ಮ ನಿಯಮವೇ ಬೇರೆ. ರಾಜ್ಯ ಸರಕಾರದ ನಿಯಮಗಳು ಬೇರೆ," ಎಂದರು.

**ಪರಿಷತ್ ಎಂದು ಬರೆದಿರುವುದು ತಪ್ಪು**

"ಮುಗಿದು ಹೋದ ಅಧ್ಯಾಯ ಎಂದು ನಾವು ತೀರ್ಮಾನ ಮಾಡಿದ್ದು ನಮ್ಮ ನಿಯಮದ ಪ್ರಕಾರ. ನಾವು ರೂಲಿಂಗ್ ಕೊಟ್ಟ ಮೇಲೆ ಮುಗಿಯಿತು. ಸಿಐಡಿಗೆ ರೆಫರೆನ್ಸ್ ಕೊಡುವಾಗ ವಿಧಾನ ಪರಿಷತ್ ಎಂದು ಬರೆದಿರುವುದು ತಪ್ಪು, ಹೀಗೆ ಪೊಲೀಸರು ಬರೆಯಬಾರದಿತ್ತು. ನಾವು ರೂಲಿಂಗ್ ಕೊಟ್ಟು ಕ್ಲೋಸ್ ಮಾಡಿದ್ದೇವೆ," ಎಂದರು.

"ನಮಗೆ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಂದು ಕೇಸ್ ಕೊಟ್ಟಿದ್ದಾರೆ. ಅದರ ಮೇಲೆ ಕೇಸ್ ಆಗಿದೆ," ಎಂದ ಅವರು, "ಕಲಾಪ ಮುಂದೂಡಿದ್ದರೂ ಅದು ವಿಧಾನ ಪರಿಷತ್‌ನಲ್ಲೇ ಆಗಿರುತ್ತದೆ. ಅಲ್ಲಿ ಏನೇ ಆದರೂ ನಮ್ಮ ಅನುಮತಿ ಪಡೆಯಬೇಕು. ವಿಧಾನ ಪರಿಷತ್ ನಮ್ಮ ಕಸ್ಟಡಿಯಲ್ಲೇ ಇರುತ್ತದೆ," ಎಂದರು.

**ಮತ್ತೊಂದು ದೂರು ಕೊಟ್ಟಿಲ್ಲ**

"ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ನನಗೆ ಮತ್ತೊಂದು ದೂರು ಕೊಟ್ಟಿಲ್ಲ, ಕೊಟ್ಟರೆ ಅದನ್ನು ಪರಿಶೀಲಿಸುತ್ತೇನೆ. ಎರಡು ಕಡೆ ಯೋಚನೆ ಮಾಡಬೇಕು. ಹೆಬ್ಬಾಳಕರ್ ಒಬ್ಬ ಮಂತ್ರಿ ಅಲ್ಲ, ಮಹಿಳೆಯಾಗಿ ನಾವು ನೋಡಬೇಕು. ಇನ್ನು ಸಿ.ಟಿ.ರವಿ ಅವರನ್ನು ಅಮಾನುಷವಾಗಿ ಎಳೆದುಕೊಂಡು ಹೋಗಿದ್ದು ಸಹ ತಪ್ಪು," ಎಂದರು.

"ನನ್ನ ಮೇಲೆ ಯಾರು ಒತ್ತಡ ಹಾಕುವುದಕ್ಕೆ ಸಾಧ್ಯವಿಲ್ಲ, ರಾಜ್ಯಪಾಲರು ಮಾಹಿತಿ ಕೇಳಿದ್ದರು. ನಾನು ಕೊಟ್ಟಿದ್ದೇನೆ," ಎಂದು ಪ್ರತಿಕ್ರಿಯಿಸಿದರು.

## ರಾಜ್ಯಪಾಲರಿಗೆ ಮಾಹಿತಿ

**ಬೆಂಗಳೂರು:** ರಾಜ್ಯಪಾಲರು ಸಭಾಪತಿಗಳಿಂದ ಆ ದಿನದ ಘಟನಾವಳಿ ಬಗ್ಗೆ ಮಾಹಿತಿ ಪಡೆದಿರುವುದು ಗಮನಾರ್ಹ. ರಾಜ್ಯಪಾಲರ ಸೂಚನೆಯಂತೆ ರಾಜಭವನದ ಅಧಿಕಾರಿಯೊಬ್ಬರು ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಸಂಪರ್ಕಿಸಿ ಡಿ.19ರ ಘಟನಾವಳಿ ಬಗ್ಗೆ ಮಾಹಿತಿ ಕೋರಿದ್ದಾರೆ. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದ ಸಭಾಪತಿಗಳು ನಂತರ ರಾಜಪಾಲರಿಗೆ ಸಂಪೂರ್ಣ ವಿವರ ನೀಡಿದ್ದಾರೆ. ಡಿ.19ರಂದು ಬೆಳಗ್ಗೆ ಕಲಾಪ ಆರಂಭವಾದಾಗಿನಿಂದ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗುವವರೆಗೆ ಆಗಿರುವ ಘಟನಾವಳಿ ಬಗ್ಗೆ ಸಂಪೂರ್ಣ ಮಾಹಿತಿ ಹಂಚಿಕೊಂಡಿದ್ದಾರೆ. ಬಳಿಕ ಸಭಾಪತಿಗಳೊಂದಿಗೆ ದೂರವಾಣಿ ಕರೆಯಲ್ಲಿ ಮಾತನಾಡಿದ ರಾಜ್ಯಪಾಲರು ಸದನವನ್ನು ನಡೆಸಿದ ಬಗೆ ಹಾಗೂ ಆರೋಪ ಪ್ರಕರಣವನ್ನು ನಿಯಮಾನುಸಾರ ಇತ್ಯರ್ಥಪಡಿಸಲು ನಡೆಸಿದ ಪ್ರಯತ್ನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

## ಕಾಂಗ್ರೆಸ್ ಶಕ್ತಿ ಏನೆಂಬುದು ಬಿಜೆಪಿಗೆ ಗೊತ್ತು: ಡಿಸಿಎಂ

**ಬೆಳಗಾವಿ:** "ಕಾಂಗ್ರೆಸ್ ಪಕ್ಷದ ಶಕ್ತಿ ಏನು ಎಂಬುದು ನಮಗೆ ಗೊತ್ತಿದೆ. ನಮಗಿಂತ ಚೆನ್ನಾಗಿ ಬಿಜೆಪಿಯವರಿಗೆ ಗೊತ್ತಿದೆ," ಎಂದು ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.



ಬಿಜೆಪಿಯ ಬೆಳಗಾವಿ ಚಲೋ ಕುರಿತು ಸುದ್ದಿಗಾರರ ಪ್ರಶ್ನೆಗೆ ಮಂಗಳವಾರ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, "ಈಗ ಆ ಮಾತು ಏಕೆ? ಯಾರಾದರೂ ಕಾರ್ಯಕ್ರಮ ಕೆಡಿಸುವ ಪ್ರಯತ್ನ ಮಾಡಲಿ. ಕಾಂಗ್ರೆಸ್ ಪಕ್ಷದ ಶಕ್ತಿ ಅವರಿಗೂ ಗೊತ್ತಿದೆ. ನಮಗೂ ಗೊತ್ತಿದೆ. ಮೊದಲು ಐತಿಹಾಸಿಕ ಕಾರ್ಯಕ್ರಮ ಮಾಡುವ ಮೂಲಕ ಇತಿಹಾಸದ ಪುಟ ಸೇರೋಣ," ಎಂದರು.

"ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮವನ್ನು ಪಕ್ಷದ ದೃಷ್ಟಿಯಿಂದ ನೋಡಬೇಕಿಲ್ಲ. ಕಾಂಗ್ರೆಸ್ ಯಾವುದೇ ಕಾರ್ಯಕ್ರಮ ಮಾಡಿದರೂ ಪಕ್ಷದ ಕಾರ್ಯಕ್ರಮವನ್ನಾಗಿ ಮಾಡುವುದಿಲ್ಲ, ದೇಶದ ಇತಿಹಾಸ ಹಾಗೂ ದೇಶವನ್ನು ಯಾವ ದಿಕ್ಕಿನಲ್ಲಿ ಮುನ್ನಡೆಸಬೇಕು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಮಾಡುತ್ತದೆ. ಹೀಗಾಗಿ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು," ಎಂದರು.

1924ರ ಡಿ.26ರಂದು ಮಧ್ಯಾಹ್ನ 3 ಗಂಟೆಗೆ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಈ ನಿಮಿತ್ತ ಡಿ. 26ರಂದು 3 ಗಂಟೆಗೆ ಸರಿಯಾಗಿ ಪಕ್ಷದ ಕಾರ್ಯಕಾರಿಣಿ ಸಮಿತಿ ಸಭೆ ನಡೆಯಲಿದೆ. 27ರಂದು ಬೆಳಗ್ಗೆ ಸುವರ್ಣ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆ ಅನಾವರಣ ಮಾಡಲಾಗುವುದು. ಬಳಿಕ ಫೋಟೋ ಸೆಷನ್, ಭೋಜನ ಕೂಟ ಆಯೋಜಿಸಲಾಗಿದೆ.

– ಡಿ.ಕೆ.ಶಿವಕುಮಾರ್ ಡಿಸಿಎಂ